THE MYSORE LEGISLATIVE ASSEMBLY.

SECOND DAY.

Tuesday, 21st October 1952.

The House met in the Assembly Hall, Old Public Offices, Bangalore, at Twelve of the Clock.

MR. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS

Transfers of Middle and Primary School Teachers.

Q.—70. **Sri B. MADHAVACHAR** (Bhadravati).—

Will the Government be pleased to state :—

Whether it is under contemplation to effect transfers immediately of Primary and Middle School teachers in the State who have put in more than 5 years of service at one place, as against the usual practice of transferring them at the beginning of the official year ?

A.— **Sri A. G. RAMACHANDRA RAO** (Minister for Law and Education).—

Generally, transfers are effected at the commencement of the official year. It is only in special cases where exigencies of service require that transfers are ordered in individual cases even in the middle of the year.

ಶ್ರೀ ಬಿ. ಮಾಧವಾಚಾರ್.—ಸರ್ಕಾರಿ ಕೆಲಸದ ಜರೂರಾತಿಯಿರುವ ವಿಶೇಷ ಸಂದರ್ಭಗಳಲ್ಲಿ ವರ್ಗಾವಣೆಮಾಡಲಾಗುವುದೆಂದು ಉತ್ತರ ಹೇಳಿದ್ದೀರಿ. 5 ವರ್ಷಕ್ಕೆ ಮೇಲ್ಪಟ್ಟು ಒಂದು ಸ್ಥಳದಲ್ಲಿ ಸರ್ವಿಸ್ ಮಾಡಿರುವುದಕ್ಕೆ ವಿಶೇಷ ಕಾರಣವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಲ್ಲ ; 5 ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿರುವವರನ್ನು ಸಂದರ್ಭ ನೋಡಿ ಬೇರೆ ಕಡೆಗೆ ಕಳುಹಿಸುತ್ತೇವೆ. ಸಾಮಾನ್ಯವಾಗಿ ವರ್ಷದ ಪ್ರಾರಂಭದಲ್ಲೇ ವರ್ಗಮಾಡಬೇಕೆಂಬುದು ಈ ನೀತಿಯಲ್ಲಿ ಅಡಕವಾಗಿದೆ.

ಶ್ರೀ ಬಿ. ಮಾಧವಾಚಾರ್.—ವರ್ಷದ ಪ್ರಾರಂಭದಲ್ಲೇ ವರ್ಗಮಾಡುವಂತೆ ಏರ್ಪಾಡುಮಾಡುತ್ತೀರಾ ?

Sri A. G. RAMACHANDRA RAO.—General policy of the Government is that.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ವರ್ಗಾವಣೆಗಳ ಹಿಂದಿರುವ ನೀತಿಯೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಸರ್ಕಾರದವರು ಮೂರು ವರ್ಷಕ್ಕೆ ಮೇಲ್ಪಟ್ಟು ಯಾರನ್ನೇ ಆಗಲಿ ಒಂದೇ ಸ್ಥಳದಲ್ಲಿ ಬಿಡುವುದು ಸೂಕ್ತವಲ್ಲವೆಂದು ಭಾವಿಸಿದ್ದಾರೆ.

ಶ್ರೀ ಪಿ ಆರ್. ರಾಮಯ್ಯ.—ವಿದ್ಯಾ ಇಲಾಖೆಯಲ್ಲಿ ಈ ರೀತಿಯಾದ ವರ್ಗಾವಣೆಗಳನ್ನು ಮಾಡುವುದು ಅವಶ್ಯಕವಿಲ್ಲವೆಂದು ಸರ್ಕಾರದವರು ಭಾವಿಸುತ್ತಾರೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೂರು ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿಡಕೂಡದೆಂಬುದು ಸರ್ಕಾರದವರು ಅನುಸರಿಸುತ್ತಿರುವ ಸಾಮಾನ್ಯ ನಿಯಮ. ಆದರೂ ಈಗ ವಿದ್ಯಾ ಇಲಾಖೆಯಲ್ಲಿ 20—22 ವರ್ಷಗಳಿಂದಲೂ ಒಂದೇ ಸ್ಥಳದಲ್ಲಿರುವುದಕ್ಕೂ ನಿದರ್ಶನಗಳಿವೆ.

ಶ್ರೀ ಪಿ. ಆರ್. ರಾಮಯ್ಯ.—ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳನ್ನು ವರ್ಗಮಾಡುವುದರಲ್ಲಿ ಅವರವರ ತಾಲ್ಲೂಕಿಗೆ ಹತ್ತಿರವಿರುವ ಕಡೆಗೇ ವರ್ಗಮಾಡಿದರೆ ಅನುಕೂಲವಾಗುತ್ತದೆ. ಹಾಗೆ ಮಾಡದೆ ದೂರ ಪ್ರದೇಶಗಳಿಗೆ ವರ್ಗಮಾಡಿ ಆ ಉಪಾಧ್ಯಾಯರುಗಳಿಗೆ ಅನಾನುಕೂಲವಾಗುವಹಾಗೆ ಮಾಡಿರುವ ಸಂದರ್ಭಗಳು ಸರ್ಕಾರದವರ ಗಮನಕ್ಕೆ ಬಂದಿವೆಯೆ ?

Mr. SPEAKER.—The Member should not argue the case. He may put a supplemantary to elicit information.

ಶ್ರೀ ಪಿ. ಆರ್. ರಾಮಯ್ಯ.—ದೂರ ಪ್ರದೇಶಗಳಿಗೆ ಪ್ರೈಮರಿ ಸ್ಕೂಲು ಉಪಾಧ್ಯಾಯರುಗಳನ್ನು ವರ್ಗಮಾಡುವುದು ಅವರಿಗೆ ಬಹಳ ಕಷ್ಟಕ್ಕೆ ಕಾರಣವಾಗಿರತ್ತದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಈ ವರ್ಗಗಳನ್ನು ಮಾಡಲಾಗುವುದು.

Provident Fund Act (Central).

Q. — 88. **Sri D. VENKATESH** (Gandhinagar).—

Will the Government be pleased to state :—

The names of the employers that have complied with the provisions of